# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು

## ಎಸ್.ಸಿ.ಸಂಖ್ಯೆ 39/2023

ಫಿರ್ಯಾದುದಾರರುಃ   ಸರ್ಕಾರದ ಪರ ಉದಯಗಿರಿ ಪೊಲೀಸರು

:: **ವಿರುದ್ಧ** ::

ಆರೋಪಿಗಳು 1 ಮತ್ತು 3   ವಿಜಯ್ ಕೆ ಮತ್ತು ಪುಷ್ಪಲತಾ

ದೋಷಾರೋಪಣೆ

ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು **ಶ್ರೀಮತಿ ಉಷಾರಾಣಿ,** ಬಿ.ಎ. (ಲಾ) ಎಲ್.ಎಲ್.ಬಿ., ಆದ ನಾನು, ಈ ಕೆಳಕಂಡ ಆರೋಪಿಗಳಾದ,

1. ವಿಜಯ್ ಕೆ ಬಿನ್ ಲೇಟ್ ಕರಿಯಪ್ಪ,
   23 ವರ್ಷ,
2. ಪುಷ್ಪಲತಾ ಕೋಂ ಲೇಟ್ ಕರಿಯಪ್ಪ,
   43 ವರ್ಷ,
   ಇಬ್ಬರ ವಾಸಃ ನಂ.94,
   ಬಾವಿ ರಸ್ತೆ, ಎ.ಕೆ. ಕಾಲೋನಿ,
   ಕ್ಯಾತಮಾರನಹಳ್ಳಿ, ಮೈಸೂರು.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

1 ನೇ ಆರೋಪಿಯಾದ ನೀವು ಸಾಕ್ಷಿ–1 ರವರ ಮಗಳಾದ ಅಪ್ರಾಪ್ತ ವಯಸ್ಸಿನ ಪ್ರಿಯಾಂಕ ಎಂಬುವವಳನ್ನು ಪ್ರೀತಿಸಿ, ದಿನಾಂಕ 23.04.2021 ರಂದು ಅವಳ ಮನೆಯಿಂದ ಕರೆದುಕೊಂಡು ಹೋಗಿ ನಿಮ್ಮ ಸ್ನೇಹಿತನ ಮನೆಯಲ್ಲಿಟ್ಟುಕೊಂಡು ಆಕೆಯೊಂದಿಗೆ ದೈಹಿಕ ಸಂಪರ್ಕ ಮಾಡಿದ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಮೊ.ಸಂಖ್ಯೆ 67/2020 ರಲ್ಲಿ ನಿಮ್ಮ ಮೇಲೆ ಕೇಸು ದಾಖಲಾಗಿ, ಸದರಿ ಕೇಸು 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದಾಗ, ಆರೋಪಿತರಾದ ನೀವು ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು ಅಪ್ರಾಪ್ತೆ ಪ್ರಿಯಾಂಕಳನ್ನು ದಿನಾಂಕಃ 01.07.2021 ರಂದು ಅಪಹರಿಸಿ ಶ್ರೀರಂಗಪಟ್ಟಣ ತಾಲ್ಲೂಕಿನ ಚಿಕ್ಕಅಂಕನಹಳ್ಳಿಯಲ್ಲಿರುವ ಶ್ರೀ ಉತ್ತೂರಮ್ಮ ದೇವಸ್ಥಾನದಲ್ಲಿ ಅವಳಿಗೆ ತಾಳಿ ಕಟ್ಟಿ ಮದುವೆ ಮಾಡಿಕೊಂಡು, 2006 ರ ಬಾಲ್ಯ

ವಿವಾಹ ನಿಷೇಧ ಕಾಯ್ದೆ ಕಲಂ 9 ರಡಿಯಲ್ಲಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಎರಡನೇಯದಾಗಿ, 1 ನೇ ಆರೋಪಿಯಾದ ನೀವು ಮೇಲೆ ನಮೂದಿಸಿದಂತೆ ಅಪ್ರಾಪ್ತ ವಯಸ್ಸಿನ ಪ್ರಿಯಾಂಕಳನ್ನು ಮದುವೆಯಾಗಿ ನಿಮ್ಮ ಮನೆಗೆ ಕರೆದುಕೊಂಡು ಬಂದ ಮೇರೆಗೆ 3 ನೇ ಆರೋಪಿತರಾದ ನೀವು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಸದರಿ ಮದುವೆ ಸಮಾರಂಭದಲ್ಲಿ ಭಾಗವಹಿಸುವ ಮೂಲಕ ಮದುವೆಯನ್ನು ಉತ್ತೇಜಿಸಿ ಹಾಗೂ ಅದನ್ನು ಶಾಸ್ತ್ರೋಕ್ತವಾಗಿ ನಡೆಸಲು ಅನುಮತಿಸಿ, ಬಾಲಕಿ ಅಪ್ರಾಪ್ತಳು ಎಂದು ತಿಳಿದಿದ್ದರೂ ಸಹ ಅವಳನ್ನು ನಿಮ್ಮ ಮನೆಯಲ್ಲಿರಿಸಿಕೊಂಡು, ಆ ಮೂಲಕ 1 ಮತ್ತು 3 ನೇ ಆರೋಪಿತರಾದ ನೀವು 2006 ರ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕಲಂ 10 ಮತ್ತು 11 ರಡಿಯಲ್ಲಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಕೊನೆಯದಾಗಿ, 1 ನೇ ಆರೋಪಿಯಾದ ನೀವು ಮೇಲೆ ನಮೂದಿಸಿದಂತೆ ಅಪ್ರಾಪ್ತ ವಯಸ್ಸಿನ ಪ್ರಿಯಾಂಕಳನ್ನು ಮದುವೆಯಾಗಿ ನಿಮ್ಮ ಮನೆಯಲ್ಲಿರಿಸಿಕೊಂಡು, ಸರಿಯಾಗಿ ನೋಡಿಕೊಳ್ಳದೇ, ಅವಳಿಗೆ ಊಟ ತಿಂಡಿ ಕೊಡದೆ, ಅವಳನ್ನು ಅವಳ ಮನೆಗೆ ಹೋಗಲು ಬಿಡದೆ, ಮನೆಯಿಂದ ಹೊರಗಡೆಗೆ ಕಳುಹಿಸದೆ, ಕುಡಿದುಕೊಂಡು ಬಂದು ಹೊಡೆಯುವುದು, ಬೈಯುವುದನ್ನು ಮಾಡುತ್ತಾ, ಆಕೆ ಯಾರೊಂದಿಗೂ ಸಹ ಫೋನ್‌ನಲ್ಲಿ ಮಾತನಾಡದಂತೆ ಕಿರುಕುಳ ನೀಡುತ್ತಿದ್ದರಿಂದ ನೀವು ನೀಡುತ್ತಿದ್ದ ಕಿರುಕುಳ ತಾಳಲಾರದೇ, ಪ್ರಿಯಾಂಕಳು ನಿಮ್ಮ ಮನೆಯಲ್ಲಿ ದಿಃ7.10.2021 ರಂದು ಸಂಜೆ 4.30 ಗಂಟೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ನೀವು ಸದರಿ ಆತ್ಮಹತ್ಯೆಗೆ ದುಷ್ಪ್ರೇರಣೆ ನೀಡಿ, ಭಾರತೀಯ ದಂಡ ಸಂಹಿತೆ ಕಲಂ 306 ರ ಅಡಿಯಲ್ಲಿ ದಂಡನಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಈ ಮೇಲ್ಕಂಡ ಆರೋಪದಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 29.09.2025

**(ಉಷಾರಾಣಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.